

ಶಿಕ್ಷಕ ವೃತ್ತಿ ನಿರ್ವಹಿಸುತ್ತ ಬರವಣಿಗೆಯನ್ನು ಪ್ರವೃತ್ತಿಯಾಗಿ ಸ್ವೀಕರಿಸಿದವರು ನಾಗೇಶ್ ಜೆ.ನಾಯಕ. ಸವದತ್ತಿ ಅವರ ಹುಟ್ಟೂರು. ವಿಮರ್ಶೆ, ಕಥೆ ಮತ್ತು ಅಂಕಣ ಬರಹಗಳ ಮೂಲಕ ಸಾಹಿತ್ಯಲೋಕಕ್ಕೆ ಪರಿಚಿತರು.'ನೀನೊಂದು ಮುಗಿಯದ ಸಂಭ್ರಮ', 'ಪ್ರೀತಿಯಿಂದ ಪ್ರೀತಿಗೆ', 'ಭರವಸೆಗಳ ಬೆನ್ನೇರಿ', 'ಪುಟ್ಟ ಪದ್ಯಗಳು', 'ಕವಿ ಸಮಯ', 'ಮಠದೊಳಗಣ ಬೆಕ್ಕು' ಅವರ ಪ್ರಕಟಿತ ಕೃತಿಗಳು.

ಇನ್ನೆರಡು ದಿನದಾಗ ತಂದು ಒಪ್ಪಿಸ್ಬೇಕು ಅಂತ ಈ ಪಂಚಾಯಿತಿ ಸೇರಿಸ್ಯಾರ. ಅದಕ್ಕ ನಿನ್ನ ವಿಚಾರ ಏನು ಅನ್ನೂದನ್ನ ಸೇರಿದ ದೈವದ ಮುಂದ ಹೇಳಿಬಿಡ' ಏನೋರು ಈಗಾಗಲೇ ಬೋರೆಗೌಡರು ಹೇಗೆ ಹೇಳಿಕೊಟ್ಟಿದ್ದರೋ ಹಾಗೆಯೇ ಗಿಳಿಪಾಠ ಒಪ್ಪಿಸಿ ಸುಮ್ಮನಾದರು.

'ಯಪ್ಪಾ, ನಾ ಸಣ್ಣ ಮನಸ್ಯಾ, ಅಂಗೈಯಷ್ಟ ಜಮೀನ್ದಾಗ ಇಲ್ಲೀತಂಕಾ ಬಾಳೇವು ಮಾಡಕೊಂಡ ಬಂದೇನಿ. ಧಣ್ಯಾರು ನಾ ಯಾವಾಗ ಕೇಳತೇನಿ ಅವಾಗ ಇಲ್ಲ ಅನ್ನದಾಂಗ ರೊಕ್ಕ ಕೊಟ್ಟಾರ. ನಾಯೇನ ರೊಕ್ಕಾ ವಾಪಸು ಕೊಡೂದಿಲ್ಲ ಅನ್ನಾಕತ್ತಿಲ್ಲ. ಮೊದ್ಲ ನಾ ಅನಪಡ ಮನಷ್ಯಾ.... ರೊಕ್ಕ ಇಸಕೊಂಡದ್ದು ಖರೇ, ಅವ್ರು ಎಲ್ಲಿ ಹೆಬ್ಬಟ್ಟ ಒತ್ತು ಅಂತಾರ ಅಲ್ಲಿ ಹೆಬ್ಬಟ್ಟು ಒತ್ತಿದ್ದು ಖರೇ'

'ಅಂದ್ರ ಏನ ಹೆಬ್ಬಟ್ಟ ಒತ್ತಿಸಿಕೊಂಡು ಹೆಚ್ಚಿಗೀ ದುಡ್ಡು ಬರಕೊಂಡಾರ ಅನ್ನಾಕತ್ತಿಯೇನ' ಶ್ಯಾನುಭೋಗರು ಮಧ್ಯೆ ಬಾಯಿ ಹಾಕಿದರು.

'ನಾ ಎಲ್ಲಿ ಹಂಗ ಅಂದೀನ್ರಿ ಯಪ್ಪಾ. ಕಷ್ಟದಾಗ ಕೈ ಹಿಡಿದ ಧಣೀ ಅವ್ರು. ಅವ್ರು ನಂಗ ಮೋಸಾ ಮಾಡ್ಯಾರ ಅಂದ್ರ ದೇವ್ರು ಕ್ಷಮಿಸಾಕಿಲ್ಲರೀ ನನ್ನ. ಈಗ ಇದ್ದಕ್ಕಿದ್ದಂಗ ಎಲ್ಲಾ ರೊಕ್ಕಾನೂ ಒಮ್ಮಿಗಿಲೇ ಕೊಡ ಅಂದ್ರ ತ್ರಾಸ ಅಕ್ಕೈತ್ರಿ. ಮೂರ್ನಾಲ್ಕು ತಿಂಗಳು ಟೈಮ್ ಕೊಡ್ರೀ ಯಪ್ಪಾ... ಹೆಂಗಾರ ಮಾಡಿ ರೊಕ್ಕದ ವ್ಯವಸ್ಥಾ ಮಾಡತೇನು' ಎಂದು ಕೆಂಚಪ್ಪ ಕೈಮುಗಿದು ನಿಂತ. ಅಲ್ಲಿ ಕೂಡಿದ ಹಿರಿಯರು ಕೂಡ ಕೆಂಚಪ್ಪನ ಮಾತಿಗೆ ಸಹಮತ ವ್ಯಕ್ತಪಡಿಸಿದರು.

'ನೋಡಪಾ ಕೆಂಚ, ಇಷ್ಟು ದಿನಾ ತಡಕೊಂಡದ್ದು ಗೊತ್ತಿದ್ದದ್ದೇ. ಈಗ ಧಣೇರು ಇನ್ನಷ್ಟ ದಿನಾ ತಡಕೊಳ್ಳಾಕ ಸಿದ್ದಿಲ್ಲ. ಹ್ಯಾಂಗಾರ ಮಾಡಿ ರೊಕ್ಕದ ವ್ಯವಸ್ಥಾ ಮಾಡು. ಬೇಕಾದ್ರ ಇನ್ನೂ ಎರಡ ದಿನಾ ಹೆಚ್ಚಿಗೆ ಟೈಮ್ ತಗೋ. ಇಲ್ಲಾಂದ್ರ ಹೊಲಾನ ಗೌಡರ ಹೆಸ್ರಿಗೆ ಬರದ ಕೊಡು. ಇದ ಈ ಪಂಚಾಯಿತಿ ಕೊನೀ ತೀರ್ಮಾನ' ಎಂದು ಬಿಟ್ಟಿ ಪರಮೇಶಿ ತನ್ನ ನಿಷ್ಠೆಯನ್ನು ಬೋರೆಗೌಡನ ಪರ ತೋರಿಸಿ ಸುಮ್ಮನಾದ.

ಈ ಮಾತು ಮುಗಿಯುತ್ತಿದ್ದಂತೆ ಪಾರವ್ವ ಬೋರೆಗೌಡನ ಕಾಲಿಗೆ ಬೀಳುತ್ತಾ 'ಹಂಗ ಮಾಡಬ್ಯಾಡ್ರೆಪ್ಪ ಧಣಿ, ಮಕ್ಳು ಮರಿ ದೊಡ್ಡೂ ಆಗ್ಯಾವ. ನೀವು ಹಿಂಗ ನಿಂತ ಕಾಲ ಮ್ಯಾಗ ರೊಕ್ಕಾ ಕೊಡ್ರೀ, ಇಲ್ಲಾ ಹೊಲ ಹೆಸ್ರಿಗೆ ಬರೀರಿ ಅಂದ್ರ ಬದುಕೋದು ಹೆಂಗೋ ನಮ್ಮಪ್ಪ? ಕರುಣಾ ತರ್ರೀ ಈ ಬಡವರ ಮ್ಯಾಗ' ಎಂದು ಕಣ್ಣೀರು ಹಾಕುತ್ತಾ ಅಂಗಲಾಚಿದಳು.

ಕಟುಕ ಗೌಡನಿಗೆ ಕರುಣೆ ಎಲ್ಲಿಯದು? ತನ್ನ ಪಟಾಲಮ್ಮನ್ನು ಮಾತಾಡಲು ಹಚ್ಚಿ ತಾನು ಸುಮ್ಮನೆ ಕೂತು ಕೇಳುವುದು ಗೌಡನ ಪಂಚಾಯಿತಿ ಲಕ್ಷಣ. ಏನೇ ಆದರೂ ಊರಿನ ಜನಕ್ಕೆ ತಾನು ಕೆಟ್ಟವನು ಎನಿಸಬಾರದು. ಎಷ್ಟೋ ನ್ಯಾಯ ತೀರ್ಮಾನದ ಪಂಚಾಯಿತಿಯಲ್ಲಿ ಇದೇ ಅಸ್ತ್ರ ಉಪಯೋಗಿಸಿ, ಎದುರಾಳಿಗೆ ನೀರು ಕುಡಿಸಿ, ಸಭ್ಯಸ್ಥ ಆಕಳ ಮುಖವನ್ನು ತೋರಿಸುವುದು ದೊಡ್ಡಸ್ಥಿಕೆಯ ಲಕ್ಷಣವಾಗಿತ್ತು. ಒಂದು ವೇಳೆ ತನ್ನ ಪಟಾಲಮ್ಮಿನ ಅಂಗಿತಕ್ಕೆ ಸಮ್ಮತಿ ಸೂಚಿಸದೆ ತಿರುಗಿ ಏನಾದರೂ ಒಂದೇ ಒಂದು ಮಾತಾಡಿದರೋ, ಗೌಡ ಉರಿದುಬಿದ್ದು...

